

# ಅಗ್ನಿದಿವ್ಯದ ಭವ್ಯ ಕ್ಷಣಗಳು!

**ಫಾಗ್ರಾಡಾಲ್ಸ್‌ಫಾಲ್‌ನಲ್ಲಿ ಆರು ಸಾವಿರ ವರ್ಷಗಳ ನಂತರ ಮತ್ತೆ ಬಾಯಿಬಿಟ್ಟಿರುವ ಅಗ್ನಿಪರ್ವತದ ರುದ್ರಭೀಕರ ಕ್ಷಣಗಳನ್ನು ಫ್ರೆಂಚ್ ಛಾಯಾಗ್ರಾಹಕ ಸ್ಟೀಫನ್ ರಿಚರ್ಡ್ ಸೆರೆಹಿಡಿದು ಜಗತ್ತಿನ ಮುಂದಿಟ್ಟಿದ್ದಾರೆ.**

■ ಮಾಂಟೊ

ರೇಕ್‌ಜಾವಿಕ್ ಐಸ್‌ಲ್ಯಾಂಡ್ ಸಮೀಪದ ರೇಕ್‌ಜನೆಸ್ ಪೆನಿನ್ಸುಲಾದ ಫಾಗ್ರಾಡಾಲ್ಸ್‌ಫಾಲ್ ಈಗ ಅಗ್ನಿಬಟ್ಟಲಾಗಿದೆ. ಅಲ್ಲಿನ ಲ್ಯಾಂಗ್ಹೋಲ್ ಎಂಬ ಶಿಖರಶೃಂಗ ಕಳೆದ ಮಾರ್ಚ್‌ನಿಂದ ಒಡಲೊಳಗಿನ ಲಾವಾಗ್ನಿಯನ್ನು ಉಗುಳುತ್ತಲೇ ಇದೆ. ಸುಮಾರು ಆರು ಸಾವಿರ ವರ್ಷಗಳ ನಂತರ ಮತ್ತೆ ಜೀವತಳೆದಿರುವ ಈ ಜ್ವಾಲಾಮುಖಿಯತ್ತ ಈಗ ಜಗತ್ತಿನ ಲಾವಾಗ್ನಿತಜ್ಞರ ಕಣ್ಣು. 'ಬೆಂಕಿಯ ಹೊಳೆ' ಎಂಬ ಮಾತನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ ಈಗ ಫಾಗ್ರಾಡಾಲ್ಸ್‌ಪಾಲ್‌ಗೆ ಹೋಗಬೇಕು.

ಹಾಗೆ ನೋಡಿದರೆ ಫಾಗ್ರಾಡಾಲ್ಸ್‌ಫಾಲ್ ಹಿಮತಾಣ. ಸುತ್ತಲಿನ ಪರ್ವತಗಳೆಲ್ಲ ಹಿಮದ ಟೊಪ್ಪಿಗೆ ಹೊತ್ತು ನಗುವ ಜಾಗ. ಸುಂದರ ಮುಖದ ಒಳಗಡೆ ಭೀಕರ ದವಡೆಗಳನ್ನೂ ಹೊಂದಿರುವುದೇ ಪ್ರಕೃತಿಯ ಗುಣವಲ್ಲವೇ? ಅದಕ್ಕೆ ತಾಜಾ ಉದಾಹರಣೆ ಎಂಬಂತೆ ಹಿಮದ ನೆಲದಲ್ಲಿ ಲಾವಾಗ್ನಿ ಕರಗಿ ಹರಿಯುತ್ತಿದೆ. ಹಾಗಾಗಿಯೇ ಈ ಐಸ್‌ಲ್ಯಾಂಡ್‌ಗೆ ಈಗ 'ಅಗ್ನಿ ಮತ್ತು ಹಿಮದ ನೆಲ' ಎಂಬ ಹೆಸರೂ ಸಿಕ್ಕಿದೆ.

ಜ್ವಾಲಾಮುಖಿ ಎಂಬುದು ಪ್ರಕೃತಿಯ ಅಪರೂಪದ ವಿದ್ಯಮಾನ. ಎಷ್ಟು ರುದ್ರಭೀಕರವೋ ಅಷ್ಟೇ ರೋಮಾಂಚಕ ವಿದ್ಯಮಾನವೂ ಹೌದು. ಹಾಗಾಗಿಯೇ ಫಾಗ್ರಾಡಾಲ್ಸ್‌ಫಾಲ್ ಅಗ್ನಿಪರ್ವತದ ಕೋಪವನ್ನು ಕಾಣಲು ಬಂದವರ ಸಂಖ್ಯೆಯೂ ಅಧಿಕ. ಸುರಕ್ಷಿತ ಅಂತರದಲ್ಲಿ ನಿಂತು ಈ ಅಪರೂಪದ ವಿದ್ಯಮಾನದ ಫೋಟೊ ತೆಗೆದು, ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುತ್ತಿರುವವರು ಸಾಕಷ್ಟಿದ್ದಾರೆ.

ಇದೆಲ್ಲ ಶುರುವಾಗಿದ್ದು 2021ರ ಮಾರ್ಚ್ 19ರಂದು. ಬೆಳಿಗ್ಗೆ 8.45ರ ಹೊತ್ತಿಗೆ ಫಾಗ್ರಾಡಾಲ್ಸ್‌ಫಾಲ್ ಶಿಖರಶೃಂಗ ಬಾಯಿಬಿಟ್ಟ ಕ್ಷಣದಲ್ಲಿ ರೇಕ್‌ಜಾವಿಕ್‌ನಲ್ಲಿ ಭೂಮಿ ಕಂಪಿಸಿತು. ಅಲ್ಲಿಂದ ಶುರುವಾದ ಜ್ವಾಲಾಮುಖಿ ಇನ್ನೂ ಲಾವಾವನ್ನು ಉಗುಳುತ್ತಲೇ ಇದೆ. ಏಪ್ರಿಲ್ 17ರಲ್ಲಿ ಮತ್ತೊಂದು ಹೊಸ ಜ್ವಾಲಾಮುಖಿಯೂ ಉದ್ಭವವಾಗಿದೆ.

ತಜ್ಞರ ಪ್ರಕಾರ ಇದು ಸಣ್ಣ ಜ್ವಾಲಾಮುಖಿಯಷ್ಟೆ! ಹಾ, ಸಣ್ಣದು ಎಂದರೆ ಬೊಗಸೆಯಲ್ಲಿ ಮೊಗೆಯುವಷ್ಟು, ಟ್ಯಾಂಕರ್‌ನಲ್ಲಿ ತುಂಬಿಕೊಂಡು ಹೋಗುವಷ್ಟು ಎಂದುಕೊಳ್ಳಬೇಡಿ. ಈಗ ಲಾವಾ ಉಗುಳುತ್ತಿರುವ ಶಿಖರದ ಬಿರುಕು 1,640 ಅಡಿಗಳಷ್ಟು ಉದ್ದವಿದೆ. ಅಲ್ಲಿಂದ ಹೊರಬರುತ್ತಿರುವ ಲಾವಾ 1 ಕೋಟಿ ಚದರ ಅಡಿಗಳಿಗಿಂತ ಹೆಚ್ಚು ವಿಸ್ತಾರವಾದ ಜಾಗದಲ್ಲಿ ಹರಡಿಕೊಂಡು ಕುದಿಯುತ್ತಿದೆ. 'ಮುಂದಿನ ದಿನಗಳಲ್ಲಿ ಈ ಲಾವಾಗ್ನಿ ಆರ್ಭಟ ಕುಂದುತ್ತದೆ. ಹಾಗಾಗಿ ಸದ್ಯದ ಸ್ಥಿತಿಯನ್ನು ನೋಡಿದರೆ ಸುತ್ತಲಿನ ನಗರಗಳಿಗೂ ಅಪಾಯವನ್ನು ತಂದೊಡ್ಡುವುದಿಲ್ಲ' ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಈ ಜ್ವಾಲಾಮುಖಿಯ ಚಿತ್ರಗಳನ್ನು, ವಿಡಿಯೊಗಳನ್ನು ಸಾಕಷ್ಟು ಜನ ಈಗಾಗಲೇ ಚಿತ್ರೀಕರಿಸಿದ್ದಾರೆ. ಆದರೆ ಅದರ ನಿಜವಾದ ರುದ್ರಭೀಕರ ಮುಖಗಳನ್ನು ಕಾಣಿಸುವ ಅದ್ಭುತ ಸಾಕ್ಷ್ಯಚಿತ್ರವನ್ನು ರೂಪಿಸಿರುವುದು ಫ್ರೆಂಚ್ ನಿರ್ದೇಶಕ, ಛಾಯಾಗ್ರಾಹಕ, ಸ್ಟೀಫನ್ ರಿಚರ್ಡ್. ಕೆಲವು ಕಾಲದ ಹಿಂದೆಯಷ್ಟೇ ಐಸ್‌ಲ್ಯಾಂಡಿಗೆ ತಮ್ಮ ವಸತಿಯನ್ನು ಬದಲಿಸಿಕೊಂಡಿದ್ದ ಅವರು ಈ ಜೀವಮಾನದ ಕ್ಷಣಗಳನ್ನು ಆಸ್ವಾದಿಸಿದ್ದಷ್ಟೇ ಅಲ್ಲದೆ ಅದರ ಎಲ್ಲ ರೌದ್ರವನ್ನೂ ತಮ್ಮ ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದಾರೆ.

ಕೇವಲ ಎರಡೂವರೆ ನಿಮಿಷದ ಈ ವಿಡಿಯೊ ಡಾಕ್ಯುಮೆಂಟರಿಗೆ ಅವರು ಕೊಟ್ಟಿರುವ ಹೆಸರು 'ಸ್ಟ್ರಾಂಡೆಡ್'. ಸ್ಟ್ರಾಂಡೆಡ್ ಎಂದರೆ ಎಳೆಯ, ಚಿಕ್ಕ ಎಂಬ ಅರ್ಥವಿದೆ. ಆದರೆ ಈ ಡಾಕ್ಯುಮೆಂಟರಿ ನಮಗೆ ಪ್ರಕೃತಿಯ ಅಗಾಧತೆಯ ದರ್ಶನ ಮಾಡಿಸುತ್ತದೆ. ಫ್ಲೋರಿಯನ್ ಫ್ಲೋರಿನ್ ಈ ಭವ್ಯ ದೃಶ್ಯಾವಳಿಗೆ ಸಂಗೀತದ ಬೆಂಬಲ ಕೊಟ್ಟಿದ್ದಾರೆ. ಅಗ್ನಿಪರ್ವತಗಳು ಸಿಡಿಸಿಡಿದು ಏಳುವುದು, ಕೆಂಪಾನೆ ಕೆಂಪ ನದಿಯಾಗಿ ಹರಿಯುವುದು, ನಿಗಿನಿಗಿ ಉರಿಯುತ್ತ ಹರಡುವುದು ಎಲ್ಲವೂ ಈ ಕಿರುಚಿತ್ರದಲ್ಲಿ ಮೈನವಿರೇಳುವಂತೆ ಸೆರೆಯಾಗಿದೆ.

ಪ್ರಕೃತಿಯ ತಪರಾಕಿಯ ಮತ್ತೊಂದು ರೂಪಕ್ಕೆ ಬೆಚ್ಚಿ ಮನೆಯಲ್ಲಿಯೇ ಬಚ್ಚಿಟ್ಟುಕೊಂಡಿರುವ ನಾವು ಈಗಂತೂ ಫಾಗ್ರಾಡಾಲ್ಸ್‌ಫಾಲ್ ಜ್ವಾಲಾಮುಖಿಯನ್ನು ಪ್ರತ್ಯಕ್ಷ ಕಾಣಲು ಸಾಧ್ಯವಿಲ್ಲ. ಆದರೆ ಈ ಕಿರುಚಿತ್ರದ ಮೂಲಕ ಅದರ ಭವ್ಯತೆಯನ್ನು ಮನೆಯಲ್ಲಿಯೇ ಕುಳಿತು ಕಾಣುವ ಅವಕಾಶವಂತೂ ಇದ್ದೇ ಇದೆ.

ಭೂವಿಸ್ಮಯ ವೀಕ್ಷಣೆಗೆ
bit.ly/2T89RZG
ಕೊಂಡಿ/ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ.